**ಕರ್ನಾಟಕ ಸರ್ಕಾರ**
**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**
**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಇ : ಜಂ ನಿ : ಸುಮಪ : 2020–21** **ದಿನಾಂಕ : 18–12–2020**

## ಮಾಧ್ಯಮದವರ ಗಮನಕ್ಕೆ

ಗ್ರಾಮ ಪಂಚಾಯಿತಿ ಚುನಾವಣೆ-2020 ಸಂಬಂಧ ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಗೆ ಸಂಬಂಧಿಸಿದಂತೆ ಚುನಾವಣೆ ಮತದಾನ ಹಾಗೂ ಎಣಿಕೆ ಕಾರ್ಯದ ವರದಿಗಾಗಿ ಪತ್ರಕರ್ತರಿಗೆ ಪ್ರವೇಶ ಪತ್ರವನ್ನು ಈ ಕಛೇರಿಯಲ್ಲಿ ವಿತರಿಸಲಾಗುವುದು.

ಸದರಿ ಪ್ರವೇಶ ಪತ್ರ ಪಡೆಯಲು ಇದರೊಂದಿಗೆ ಲಗತ್ತಿಸಲಾಗಿರುವ ನಮೂನೆಯಲ್ಲಿ ವಿವರಗಳನ್ನು ತುಂಬಿ ಇತ್ತೀಚಿನ ಎರಡು ಭಾವಚಿತ್ರಗಳೊಂದಿಗೆ ದಿನಾಂಕ 19-12-2020ರ ಅಪರಾಹ್ನ 12-00ರೊಳಗೆ ಉಪನಿರ್ದೇಶಕರ ಕಚೇರಿ, ಬೆಂಗಳೂರು ನಗರ ಜಿಲ್ಲೆ, ವಾರ್ತಾ ಸೌಧ, 2ನೇ ಮಹಡಿ, ಸಂಖ್ಯೆ.17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು ಇಲ್ಲಿಗೆ ಸಲ್ಲಿಸಲು ಕೋರಿದೆ.

*ಗಮನಿಕೆ*

ದಿನಾಂಕ 19-12-2020ರ ಅಪರಾಹ್ನ 12-00ರ ನಂತರ ಬಂದ ಮನವಿಗಳನ್ನು ಕಡ್ಡಾಯವಾಗಿ ಪರಿಗಣಿಸಲಾಗುವುದಿಲ್ಲ.

ಉಪನಿರ್ದೇಶಕರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ಬೆಂಗಳೂರು ನಗರ ಜಿಲ್ಲೆ.

<u>ನಮೂನೆ</u>

| ಕ್ರ.ಸಂ | | |
|---|---|---|
| 1 | ಪೂರ್ಣ ಹೆಸರು: | |
| 2 | ಪದನಾಮ: | |
| 3 | ಕಾರ್ಯನಿರ್ವಹಿಸುತ್ತಿರುವ ಸಂಸ್ಥೆ: | |
| 4 | ಮುದ್ರಣ/ವಿದ್ಯುನ್ಮಾನ ಮಾಧ್ಯಮ | |
| 5 | ವಿಳಾಸ: | \ |
| 5 | ಮೊಬೈಲ್ ಸಂಖ್ಯೆ: | |
| 6 | ಮಾಧ್ಯಮ ಮಾನ್ಯತಾ ಕಾರ್ಡ್ ಸಂಖ್ಯೆ: | |
| 7 | ಸಂಸ್ಥೆಯ ಶಿಫಾರಸ್ಸು ಪತ್ರ:<br>(ಮಾನ್ಯತಾ ಕಾರ್ಡ್ ಇಲ್ಲದವರಿಗೆ) | |
| 8 | ಇತ್ತೀಚಿನ 2 ಭಾವಚಿತ್ರ | |

ಸ್ಥಳ: ಸಹಿ:

ದಿನಾಂಕ: ಹುದ್ದೆ:

# ಪತ್ರಿಕಾ ಪ್ರಕಟಣೆ

## ಕೆ ಎಸ್ ಆರ್ ಟಿ ಸಿ ವ್ಯಾಪ್ತಿಯಲ್ಲಿ ಒಟ್ಟು 13 ಸಿಬ್ಬಂದಿಗಳ ಮೇಲೆ ಕ್ರಮ

ಬೆಂಗಳೂರು, ಡಿಸೆಂಬರ್ 18 (ಕರ್ನಾಟಕ ವಾರ್ತೆ):

ಇತ್ತೀಚಿಗೆ ರಾಜ್ಯದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರು ನಡೆಸಿದ ಮುಷ್ಕರದ ಸಮಯದಲ್ಲಿ ಕರ್ತವ್ಯ ನಿರತ ಸಿಬ್ಬಂದಿಗಳ ಮೇಲೆ ದೈಹಿಕ ಹಲ್ಲೆ ಮಾಡಿ ,ಬಸ್ಸುಗಳನ್ನು ಜಖಂಗೊಳಿಸಿದ ಹಾಗೂ FIR ದಾಖಲಾದ ಕೆಲವೇ ಸಿಬ್ಬಂದಿಗಳ ಮೇಲೆ ಮಾತ್ರ ನಿಯಮಾನುಸಾರ ಕ್ರಮಕೈಗೊಳ್ಳಲಾಗಿದ್ದು, ಇನ್ನಾವುದೆ ಸಿಬ್ಬಂದಿ ಮೇಲೆ ಕ್ರಮಕೈಗೊಂಡಿರುವುದಿಲ್ಲ ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಸ್ಪಷ್ಟಪಡಿಸಿದೆ.

ರಾಜ್ಯಾದ್ಯಂತ ನಡೆದ ಮುಷ್ಕರದಲ್ಲಿ ಕೋಲಾರ ವಿಭಾಗದಲ್ಲಿ 200 ನೌಕರರ ಮೇಲೆ ಕ್ರಮ ತೆಗೆದುಕೊಳ್ಳಲಾಗಿದೆ ಎಂಬುದು ಸತ್ಯಕ್ಕೆ ದೂರವಾದದ್ದು. ಕೆ ಎಸ್ ಆರ್ ಟಿ ಸಿ ವ್ಯಾಪ್ತಿಯಲ್ಲಿ ಒಟ್ಟು 13 ಸಿಬ್ಬಂದಿಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆ.

ಮುಷ್ಕರ ಸಮಯದ ನಾಲ್ಕು ದಿನಗಳ ವೇತನ ಪಾವತಿ ಕಡಿತದ ಬಗ್ಗೆಯೂ ಇನ್ನೂ ಯಾವುದೇ ಕ್ರಮತೆಗೆದುಕೊಂಡಿರುವುದಿಲ್ಲ, ಮಂಡಳಿ/ಸರ್ಕಾರದ ಮಟ್ಟದಲ್ಲಿ ಇದರ ಬಗ್ಗೆ ಚರ್ಚಿಸಿ ಕ್ರಮತೆಗೆದುಕೊಳ್ಳಲಾಗುವುದು. ಎಂಬುದನ್ನು ಸ್ಪಷ್ಟಪಡಿಸಲಾಗಿದೆ. ಮಂಡಳಿ/ಸರ್ಕಾರದ ಮಟ್ಟದಲ್ಲಿ ಇದರ ಬಗ್ಗೆ ಚರ್ಚಿಸಿ ಕ್ರಮತೆಗೆದುಕೊಳ್ಳಲಾಗುವುದು ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

# ಸಚಿವ ಸಂಪುಟ ಸಭೆ

**ಬೆಂಗಳೂರು, ಡಿಸೆಂಬರ್ 18 (ಕರ್ನಾಟಕ ವಾರ್ತೆ):**

**ಡಿಸೆಂಬರ್ 28 ಸೋಮವಾರ ಬೆಳಿಗ್ಗೆ 11-00 ಗಂಟೆಗೆ ಸಚಿವ ಸಂಪುಟ ಸಭೆಯನ್ನು ಕೊಠಡಿ ಸಂಖ್ಯೆ 334, ಸಮ್ಮೇಳನ ಸಭಾಂಗಣ, ವಿಧಾನ ಸೌಧ ಇಲ್ಲಿ ಕರೆಯಲಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.**

# ಪ್ರವಾಸ

**ಬೆಂಗಳೂರು, ಡಿಸೆಂಬರ್ 18 (ಕರ್ನಾಟಕ ವಾರ್ತೆ):**

ಡಾ : ಸಿ. ಸೋಮಶೇಖರ್ ಅಧ್ಯಕ್ಷರು, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಇವರು ಡಿಸೆಂಬರ್ 19 ಮತ್ತು 20 ರಂದು ಚಾಮರಾಜನಗರ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಡಿಸೆಂಬರ್ 20 ರಂದೇ ಕೇಂದ್ರಸ್ಥಾನಕ್ಕೆ ಹಿಂತಿರುಗುವರು.

# ಪ್ರವಾಸ

ಬೆಂಗಳೂರು, ಡಿಸೆಂಬರ್ 18 (ಕರ್ನಾಟಕ ವಾರ್ತೆ):

ಡಾ : ಸಿ. ಸೋಮಶೇಖರ್ ಅಧ್ಯಕ್ಷರು, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಇವರು ಡಿಸೆಂಬರ್ 19 ಮತ್ತು 20 ರಂದು ಚಾಮರಾಜನಗರ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಡಿಸೆಂಬರ್ 20 ರಂದೇ ಕೇಂದ್ರಸ್ಥಾನಕ್ಕೆ ಹಿಂತಿರುಗುವರು.

ಡಿಸೆಂಬರ್ 21 ಮತ್ತು 22 ರಂದು ಬೀದರ್ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಡಿಸೆಂಬರ್ 22 ರಂದು ಕೇಂದ್ರಸ್ಥಾನಕ್ಕೆ ಹಿಂತಿರುಗುವರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

# ಹುದ್ದೆಯಿಂದ ವಜಾ

ಬೆಂಗಳೂರು, ಡಿಸೆಂಬರ್ 18 (ಕರ್ನಾಟಕ ವಾರ್ತೆ):

ಪರಮೇಶ್ ಎಂ. ಬಿನ್ ಲೇಟ್ ಮಹದೇವು, ಕೆ.ಆರ್. ಸಾಗರ ಗ್ರಾಮ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ ಇವರು ಉಪ ವಲಯ ಅರಣ್ಯಾಧಿಕಾರಿ ಹುದ್ದೆಗೆ ಆಯ್ಕೆಯಾಗುವಾಗ ಬಿ.ಎಸ್ಸಿ., ಅರಣ್ಯ ಶಾಸ್ತ್ರ ಪದವಿಯನ್ನು ಮೇವಾರ್ ಯೂನಿವರ್ಸಿಟಿ, ರಾಜಾಸ್ಥಾನ ಇಲ್ಲಿ ಪಡೆದಿರುವುದಾಗಿ ಸಲ್ಲಿಸಿದ ಪ್ರಮಾಣ ಪತ್ರಗಳು ನಕಲಿ ಎಂಬುದು ದೃಢಪಟ್ಟಿರುವ ಹಿನ್ನೆಲೆಯಲ್ಲಿ ಸುಳ್ಳು ದಾಖಲೆಗಳನ್ನು ನೀಡಿ ಸರ್ಕಾರಿ ಉದ್ಯೋಗ ಪಡೆಯುವ ಮೂಲಕ ಸರ್ಕಾರಕ್ಕೆ ವಂಚನೆ ಎಸಗಿರುವ ಕಾರಣಗಳ ಮೇಲೆ ಸದರಿಯವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಉಪ ವಲಯ ಅರಣ್ಯಾಧಿಕಾರಿ ಹಾಗೂ ಮೋಜಣಿದಾರ ಹುದ್ದೆಯಿಂದ ವಜಾಗೊಳಿಸಿ ಆದೇಶಿಸಲಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

# ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯಕ್ಕೆ ಅರ್ಜಿ ಸಲ್ಲಿಸಲು ಅವಧಿ ವಿಸ್ತರಣೆ

ಬೆಂಗಳೂರು, ಡಿಸೆಂಬರ್ 18 (ಕರ್ನಾಟಕ ವಾರ್ತೆ): ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯು 2020-21ನೇ ಸಾಲಿಗೆ ಮಂಡಳಿಗೆ ವಂತಿಗೆ ಪಾವತಿಸುವ ವಿವಿಧ ಸಂಸ್ಥೆ-ಖಾರ್ಕಾನೆಗಳಲ್ಲಿ ಕೆಲಸ ನಿರ್ವಹಿಸುವ ಸಂಘಟಿತ ಕಾರ್ಮಿಕರ ಮಕ್ಕಳ ಹಿತದೃಷ್ಟಿಯಿಂದ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯಕ್ಕೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಅವಧಿಯನ್ನ ಜನವರಿ 30, 2021ರ ವರೆಗೆ ವಿಸ್ತರಿಸಲಾಗಿದೆ.

**ಆಸಕ್ತ ವಿದ್ಯಾರ್ಥಿಗಳು ಕಾರ್ಮಿಕ ಕಲ್ಯಾಣ ಮಂಡಳಿಯ ವೆಬ್‌ಸೈಟ್ www.klwb.karnataka.bov.in ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.**

**ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ, ಕಾರ್ಮಿಕ ಕಲ್ಯಾಣ ಭವನ, ನಂ. 48, 2ನೇ ಮಹಡಿ, ಮತ್ತೀಕೆರೆ ಮುಖ್ಯ ರಸ್ತೆ, ಯಶವಂತಪರ, ಬೆಂಗಳೂರು–560022, ದೂರವಾಣಿ ಸಂಖ್ಯೆ : 8277291175, 8277120202, 080–23475188 ನ್ನು ಸಂಪರ್ಕಿಸಬಹುದು.**

**'ಆತ್ಮ ನಿರ್ಭರ' Tracker ತಂತ್ರಾಂಶ**

**ಬೆಂಗಳೂರು, ಡಿಸೆಂಬರ್ 18 (ಕರ್ನಾಟಕ ವಾರ್ತೆ):** ಇಂದು ದಿನಾಂಕ: 18-12-2020ರಂದು ನಡೆದ ಸಮಾರಂಭದಲ್ಲಿ **Ms. Shoko Noda, Resident representative, UNDP ಇವರು ಕರ್ನಾಟಕ, ಪಂಜಾಬ್, ಹರಿಯಾಣ ರಾಜ್ಯಗಳಿಗೆ ಸನ್ಮಾನ್ಯ ಪ್ರಧಾನ ಮಂತ್ರಿಗಳು ಘೋಷಿಸಿರುವ 'ಆತ್ಮನಿರ್ಭರ' ಪ್ಯಾಕೇಜ್ ಅಡಿಯಲ್ಲಿ ರಾಜ್ಯ ಸರ್ಕಾರವು ಪ್ರಸ್ತಾಪಿಸಿದ ಯೋಜನೆಗಳ ಪ್ರಗತಿ ಪರಿಶೀಲನೆಗಾಗಿ 'ಆತ್ಮ ನಿರ್ಭರ' Tracker ತಂತ್ರಾಂಶವನ್ನು** ಮುಖ್ಯ ಕಾರ್ಯದರ್ಶಿಗಳಾದ ಟಿ.ಎಂ. ವಿಜಯಭಾಸ್ಕರ್‌ರವರಿಗೆ ಹಸ್ತಾಂತರಿಸಿದರು.

ಮುಖ್ಯ ಕಾರ್ಯದರ್ಶಿಗಳು ಕೃತಜ್ಞತೆಗಳನ್ನು ಸಲ್ಲಿಸಿ, ಈ ತಂತ್ರಾಂಶವನ್ನು ರಾಜ್ಯದ ಪರವಾಗಿ ಸ್ವೀಕರಿಸಿದರು. ಸದರಿ ತಂತ್ರಾಂಶದಲ್ಲಿ ರಾಜ್ಯದ ಪ್ರಗತಿ ಪರಿಶೀಲನೆಯನ್ನು ತಂತ್ರಾಂಶದ ಜೊತೆಗೆ ಕ್ರೋಢೀಕರಿಸಿ ವಿವಿಧ ಇಲಾಖೆಗಳಿಂದ ಸಲ್ಲಿಸತಕ್ಕಂತಹ ಪ್ರಸ್ತಾವನೆಗಳನ್ನು **ಮುಖ್ಯಮಂತ್ರಿಗಳು ಹಾಗೂ ಮುಖ್ಯ ಕಾರ್ಯದರ್ಶಿಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮುಂದಿನ ದಿನಗಳಲ್ಲಿ ಪರಿಶೀಲಿಸಲು ಅನುಕೂಲವಾಗುವುದು.** ಈ ತಂತ್ರಾಂಶವನ್ನು ರಾಜ್ಯ ಸರ್ಕಾರಗಳಿಗೆ **UNDP ವತಿಯಿಂದ ಉಚಿತವಾಗಿ** ಒದಗಿಸಲಾಗಿದೆ. **ಈ ತಂತ್ರಾಂಶವು ಸುಮಾರು 16 ವಲಯಗಳನ್ನು ಹಾಗೂ 50 ಇಲಾಖೆಗಳ 200ಕ್ಕಿಂತ ಹೆಚ್ಚು ಯೋಜನೆಗಳನ್ನು ಒಳಗೊಂಡಿದೆ.**

ಮುಖ್ಯ ಕಾರ್ಯದರ್ಶಿಯವರು ಮಾತನಾಡುತ್ತಾ, **ಸದರಿ ತಂತ್ರಾಂಶವು ಮೊಬೈಲ್ ಸ್ನೇಹಿ ಹಾಗೂ ಬಳಕೆದಾರ ಸ್ನೇಹಿ ಸಹ ಆಗಿದ್ದು, ಸುಮಾರು 30000ಕ್ಕಿಂತ ಹೆಚ್ಚು ಅಧಿಕಾರಿಗಳು ಗ್ರಾಮ ಪಂಚಾಯಿತಿ ಮಟ್ಟದಿಂದ ರಾಜ್ಯ ಮಟ್ಟದವರೆಗೆ ಇದರ ಉಪಯೋಗವನ್ನು ಪಡೆಯಲಿದ್ದಾರೆ ಎಂದು ತಿಳಿಸಿದರು.**

ವಿವಿಧ ಇಲಾಖೆಗಳ ಕಾರ್ಯಕ್ರಮಗಳನ್ನು ಒಂದೇ ಸೂರಿನಡಿಯಲ್ಲಿ ಕ್ರೋಢೀಕರಿಸಿ ಮುಂದಿನ ದಿನಗಳಲ್ಲಿ 'ಆತ್ಮ ನಿರ್ಭರ' ಯೋಜನೆಯ ಅಡಿಯಲ್ಲಿ **ರಾಜ್ಯಕ್ಕೆ ಹೆಚ್ಚಿನ ಅನುದಾನವನ್ನು ಪಡೆಯುವಂತಹ ಕ್ರಮಕ್ಕಾಗಿ** ಇದು ಉಪಯೋಗವಾಗುವುದು. ಸದರಿ ತಂತ್ರಾಂಶವನ್ನು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯಲ್ಲಿರುವ UNDP ಯ ಸುಸ್ಥಿರ ಅಭಿವೃದ್ಧಿ ಗುರಿಗಳ ಸಮನ್ವಯ ಕೇಂದ್ರದ ಮೂಲಕ ನಿರ್ವಹಣೆ ಮಾಡಲಾಗುವುದು.

**ಛಾಯಾಚಿತ್ರ ಶೀರ್ಷಿಕೆ )**

**ಕೇಂದ್ರ ಸರ್ಕಾರದ ಆತ್ಮ ನಿರ್ಭರ ಯೋಜನೆಗೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರ, ಹರಿಯಾಣ ಹಾಗೂ ಪಂಜಾಬ್ ರಾಜ್ಯ ಸರ್ಕಾರಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಆನ್‌ಲೈನ್ ಕಾರ್ಯಕ್ರಮದಲ್ಲಿ ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ ಟಿ. ಎಂ. ವಿಜಯಭಾಸ್ಕರ್ ಮತ್ತು ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಡಾ: ಶಾಲಿನಿ ರಜನೀಶ್ ಅವರು ಭಾಗವಹಿಸಿದ್ದರು.**

## ATAMANIRBHAR BHARAT TRACKER

## State level web enabled platform to track implementation and monitoring of the AatamaNirbhar Bharat stimulus package

**BACKGROUND:**

To aid the countrys' revival from the COVID crisis, Hon'ble Prime Minister of India made a clarion call for the nation to become self-reliant – 'atamanirbhar'. To initiate and ensure this 'Atamanirbahr Bharat' Abhiyan, an economic stimulus package of more than Rs 29 lakh crore was announced for

- States to introduce policy reforms & new initiatives

- funding various sectors viz. cottage industry, MSMEs, labourers, migrants, farmers, middle class, industries and such in becoming self-reliant

## SECTOR-WISE KEY MEASURES ANNOUNCED:

1. MSMEs: - Collateral Free Loans - Subordinate Debt for Stressed MSMEs - Fund of Funds for MSMEs - Special Liquidity Scheme for NBFCs/ HFCs/ MFIs - New Definition of MSMEs

2. Agriculture & Allied: - Agri Infrastructure Fund - Concessional Credit to Farmers Emergency Working Capital for Farmers through NABARD - Formalization of Micro-Food Enterprises - Pradhan Mantri Matsya Sampada Yojana

3. Migrant Workers: - Free Food Grain Supply to Migrants - One Nation One Ration Card - Affordable Rental Housing Complexes (under PMAY)

4. Social Sector: - Additional MGNREGS Allocation - Public Health - Technology Driven Education

5. Other Key Measures: - Scheme for Street Vendors (PM SVANidhi) - Liquidity Support to Power Discoms - Credit Linked Subsidy Scheme for Middle Income Group

## NEED FOR AATMANIRBHAR TRACKER (ANB):

Towards fulfilling the vision of 'AatmaNirbhar Bharat' it is imperative for the State Government to push the reform agenda and devise a mechanism to enable maximum reach and benefit of the economic stimulus package announced by the Govt. of India. For timely implementation and real-time monitoring of the package components, there arises a need to facilitate the government departments and senior officials of the state towards same.

The Aatmanirbhar Tracker (ANB) is a State level web enabled platform for tracking implementation and monitoring of ANB package. This real-time facilitation tool for the all state departments would support development of the State's Aatmanirbhar Action Plan with online monitoring and mid-course corrective actions.

## OBJECTIVES:

The stimulus package is driven by 200+ schemes across 50+ departments and its benefits complex in nature to reach the end users. The ANB, a centralized web & mobile friendly platform will help the departments and its officers to

- drive 35+ department related schemes, monitor their current status, beneficiaries reached and budget issuance/ utilization - act as single window solution to take immediate decisions and take necessary corrective actions - perform data analysis to understand bottle necks in scheme implantation across sectors

## BENEFITS:

- ANB tracker has already mapped interventions under the stimulus package to state departments. - Aligning existing interventions and identifying new schemes can help departments explore funding possibilities under the package.
- Helping Chief Secretary, Principal Secretaries, Administrative heads & other senior officials to review the overall progress of State or their Department in line with ANB package
- ANB tracker will be playing a vital role in evidence-based planning and policy interventions along with easy reporting & option to download for further analysis.

**FEATURES**:
- User friendly, integrated and self-explanatory centralized platform for real time use and data analysis.
- Creation and edit of sectors, departments, activities, interventions and indicators with few clicks on the dashboard
- Tracking 200+ activities at departments and intervention level - Monitoring 300+ relevant indicators - Breakup and utilization of budget
– State and Centre contributed integrated budget dashboards - Downloadable reports in PDF and Excel format
- User (Chief Minister, Chief Secretary, Principal Secretary, HoDs etc.) and Department wise access. - Accessible at desktop, laptop, mobile, tablet.

## Karnataka State Pollution Control Board
## ParisaraBhavan, Bengaluru
## AQI of the CAAQM stations established in Bengaluru City
## Date :18.12.2020

| Sl. No. | Station | AQI | Category | Prominent Pollutant |
|---|---|---|---|---|
| 1 | Veterinary College Hebbal | 78 | Satisfactory | $PM_{10}$ |
| 2 | Jayanagar 5th Block, Shalini ground | 92 | Satisfactory | $PM_{10}$ |
| 3 | KAVIKA, Mysore Road | 101 | Moderate | $PM_{10}$ |
| 4 | Rajeev Gandhi Institute of Chest Disease, NIMHANS, Hombegowda Nagar | 61 | Satisfactory | $PM_{10}$ |

| | | | | |
|---|---|---|---|---|
| 5 | HSR Layout, near Central Silkboard | 66 | Satisfactory | $PM_{2.5}$ |
| 6 | City Railway Station, Magestic, Bengaluru | 97 | Satisfactory | $PM_{10}$ |
| 7 | Saneguruvanahalli, NisargaBhavan, KSPCB, Shivanagara | 49 | Good | CO |
| 8 | BWSSB, Kadabesanahalli | 52 | Satisfactory | $PM_{2.5}$ |
| 9 | Peenya | 82 | Satisfactory | $O_3$ |
| 10 | BTM Layout | 67 | Satisfactory | $PM_{2.5}$ |

| **Category (Range)** | **Possible Health Impacts** | **Category (Range)** | **Possible Health Impacts** |
|---|---|---|---|
| Good (0–50) | Minimal Impact | Poor (201–300) | Breathing discomfort to people on prolonged exposure |
| Satisfactory (51–100) | Minor breathing discomfort to sensitive people | Very Poor (301–400) | Respiratory illness to the people on prolonged exposure |
| Moderate (101–200) | Breathing discomfort to the people with lung, Heart disease, children and older | Severe (>401) | Respiratory effects even on healthy people |

**ಕರ್ನಾಟಕರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ**

**ಪರಿಸರ ಭವನ, ಬೆಂಗಳೂರು.**

**ಬೆಂಗಳೂರು ನಗರದಲ್ಲಿ ಸ್ಥಾಪಿಸಿರುವ ನಿರಂತರ ಪರಿವೇಷ್ಟಕ ವಾಯುಗುಣಮಟ್ಟ ಮಾಪನ ಕೇಂದ್ರಗಳ ವಾಯುಗುಣಮಟ್ಟ ಸೂಚ್ಯಂಕ (AQI), ಬೆಂಗಳೂರು**

**ದಿನಾಂಕ: 18.12.2020**

| ಕ್ರಮ | ಮಾಪನ ಕೇಂದ್ರಗಳ ಹೆಸರು | ವಾಯುಗುಣಮಟ್ಟ | ವರ್ಗ | ಪ್ರಮುಖ |
|---|---|---|---|---|
| | | | | |

| ಸಂಖ್ಯೆ | | ಸೂಚ್ಯಂಕ (AQI) | | ಮಾಲಿನ್ಯಕಾರಕ |
|---|---|---|---|---|
| 1 | ಪಶುವೈದ್ಯಕೀಯಕಾಲೇಜು, ಹೆಬ್ಬಾಳ | 78 | ತೃಪ್ತಿಕರ | $PM_{10}$ |
| 2 | ಜಯನಗರ 5ನೇ ಬ್ಲಾಕ್, ಶಾಲಿನಿ ಮೈದಾನ | 92 | ತೃಪ್ತಿಕರ | $PM_{10}$ |
| 3 | ಕವಿಕ, ಮೈಸೂರುರಸ್ತೆ | 101 | ಸಾಧಾರಣ | $PM_{10}$ |
| 4 | ರಾಜೀವ್‌ಗಾಂಧಿಎದೆರೋಗಗಳ ಸಂಸ್ಥೆ, ನಿಮ್ಹಾನ್ಸ್ ಹೊಂಬೆಗೌಡನಗರ | 61 | ತೃಪ್ತಿಕರ | $PM_{10}$ |
| 5 | ಹೆಚ್.ಎಸ್.ಆರ್ ಲೇಔಟ್, ಕೇಂದ್ರರೇಷ್ಮೆ ಮಂಡಳಿ ಹತ್ತಿರ | 66 | ತೃಪ್ತಿಕರ | $PM_{2.5}$ |
| 6 | ನಗರರೈಲ್ವೆ ನಿಲ್ದಾಣ, ಮೆಜೆಸ್ಟಿಕ್, ಬೆಂಗಳೂರು | 97 | ತೃಪ್ತಿಕರ | $PM_{10}$ |
| 7 | ಸಾಣೆಗುರುವನಹಳ್ಳಿ, ನಿಸರ್ಗ ಭವನ, ಕರ್ನಾಟಕರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, | 49 | ಉತ್ತಮ | CO |
| 8 | BWSSB, ಕಾಡಬೀಸನಹಳ್ಳಿ | 52 | ತೃಪ್ತಿಕರ | $PM_{2.5}$ |
| 9 | ಪೀಣ್ಯ | 82 | ತೃಪ್ತಿಕರ | $O_3$ |
| 10 | ಬಿಟಿಎಂ ಲೇಔಟ್ | 67 | ತೃಪ್ತಿಕರ | $PM_{2.5}$ |

| ವರ್ಗ(ಶ್ರೇಣಿ) | ಉಂಟಾಗಬಹುದಾದಆರೋಗ್ಯ ಪರಿಣಾಮಗಳು |
|---|---|
| **ಉತ್ತಮ (0–50)** | ಕನಿಷ್ಠ ಪರಿಣಾಮ |
| **ತೃಪ್ತಿಕರ (51–100)** | ಸೂಕ್ಷ್ಮಜನರಿಗೆ ಸಣ್ಣ ಉಸಿರಾಟದ ಅಸ್ವಸ್ಥತೆ |
| **ಸಾಧಾರಣ (101–200)** | ಶ್ವಾಸಕೋಶ, ಹೃದಯಕಾಯಿಲೆಯವರು, ಮಕ್ಕಳು ಮತ್ತು ಹಿರಿಯ ವಯಸ್ಕರಿಗೆ ಉಸಿರಾಟದ ಅಸ್ವಸ್ಥತೆ |
| **ಕಳಪೆ (201–300)** | ದೀರ್ಘಕಾಲಿಕಒಡ್ಡುವಿಕೆಯಿಂದಜನರಿಗೆ ಉಸಿರಾಟದ ಅಸ್ವಸ್ಥತೆ |
| **ಅತಿ ಕಳಪೆ (301–400)** | ದೀರ್ಘಕಾಲಿಕಒಡ್ಡುವಿಕೆಯಿಂದಜನರಿಗೆ ಶ್ವಾಸಕೋಶದಅಸ್ವಸ್ಥತೆ |
| **ತೀವ್ರ (>401)** | ಆರೋಗ್ಯವಂತಜನರಿಗೂ ಉಸಿರಾಟದ ಅಸ್ವಸ್ಥತೆ |